



## ಶ್ರೀ ಶಿವಕುಮಾರ ಕಲಾಸಂಘ (ರಿ) ಸಾಣೇಹಳ್ಳಿ
## ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು

**ಸಹಯೋಗದೊಂದಿಗೆ**

# ರಂಗ ತರಬೇತಿ ಶಿಬಿರ

(ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ)

ಸಾಣೇಹಳ್ಳಿ, ನವೆಂಬರ್ 29; ಇಲ್ಲಿನ ಶಿವಕುಮಾರ ಕಲಾಸಂಘ ಮತ್ತು ಕರ್ನಾಟಕ ನಾಟಕ ಅಕಾಡೆಮಿಯ ವಿಶೇಷ ಘಟಕ ಯೋಜನೆಯಡಿ ಆಸಕ್ತ ಪರಿಶಿಷ್ಟ ಜಾತಿಯ ಅಭ್ಯರ್ಥಿಗಳಿಗೆ ಸಾಣೇಹಳ್ಳಿಯಲ್ಲಿ ರಂಗ ತರಬೇತಿ ಶಿಬಿರವನ್ನು ಆಯೋಜಿಸಲಾಗಿದೆ. ಆಯ್ಕೆ ಬಯಸುವ ಅಭ್ಯರ್ಥಿಗಳು ಡಿಸೆಂಬರ್ 4 ರಂದು ಸಾಣೇಹಳ್ಳಿಯಲ್ಲಿ ನಡೆಯುವ ಸಂದರ್ಶನಕ್ಕೆ ಹಾಜರಾಗಬೇಕು. ಡಿಸೆಂಬರ್ 5 ರಿಂದ ಒಂದು ತಿಂಗಳು ರಂಗ ತರಬೇತಿ ನೀಡಲಾಗುವುದು. ತರಬೇತಿಯಲ್ಲಿ ನಟನೆ, ರಂಗ ಸಂಗೀತ, ನೆರಳು–ಬೆಳಕಿನ ವಿನ್ಯಾಸ, ಧ್ವನಿ, ಪ್ರಸಾಧನ, ರಂಗಸಜ್ಜಿಕೆ, ರಂಗಾಟಗಳು, ಭಾಷಾ ಬಳಕೆ, ಆಂಗಿಕ ಚಲನೆ, ರಂಗಭೂಮಿಯ ಇತಿಹಾಸ ಮುಂತಾದ ರಂಗ ಚಟುವಟಿಕೆಗಳ ಬಗ್ಗೆ ತಜ್ಞರಿಂದ ಉಪನ್ಯಾಸ ಮತ್ತು ಪ್ರಾತ್ಯಕ್ಷಿಕೆಯ ಮೂಲಕ ತರಬೇತಿ ನೀಡಲಾಗುವುದು. ಈ ಅವಧಿಯಲ್ಲಿ 25 ಜನಕ್ಕೊಂದರಂತೆ ಎರಡು ತಂಡಗಳಿಗೆ ತಲಾ ಒಂದೊಂದು ನಾಟಕವನ್ನು ನುರಿತ ನಿರ್ದೇಶಕರು ನಿರ್ದೇಶಿಸುವರು. ಶಿಬಿರದ ಕೊನೆಯಲ್ಲಿ ಆ ಎರಡು ನಾಟಕಗಳನ್ನು ಸಾಣೇಹಳ್ಳಿ ಮತ್ತು ಬೆಂಗಳೂರಿನಲ್ಲಿ ಪ್ರದರ್ಶಿಸಲಾಗುವುದು. ಶಿಬಿರದಲ್ಲಿ ಕೇವಲ 50 ಜನ ಪರಿಶಿಷ್ಟ ಜಾತಿಯ ಯುವಕ–ಯುವತಿಯರಿಗೆ ಮಾತ್ರ ಅವಕಾಶವಿದ್ದು ಆಸಕ್ತರು ಕೂಡಲೇ ಜಾತಿ ಪ್ರಮಾಣ ಪತ್ರ ಮತ್ತು ಎರಡು ಭಾವಚಿತ್ರಗಳೊಂದಿಗೆ ಡಿಸೆಂಬರ್ 3 ರೊಳಗೆ 'ಕಾರ್ಯದರ್ಶಿ/ಸಂಚಾಲಕರು, ಶ್ರೀ ಶಿವಕುಮಾರ ಕಲಾಸಂಘ, ಸಾಣೇಹಳ್ಳಿ–577515, ಹೊಸದುರ್ಗ–ತಾಲ್ಲೂಕು, ಚಿತ್ರದುರ್ಗ–ಜಿಲ್ಲೆ' ಈ ವಿಳಾಸಕ್ಕೆ ಅರ್ಜಿ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ 9482942394, 9449649850 ಮೊಬೈಲ್ ಸಂಖ್ಯೆಯನ್ನು ಸಂಪರ್ಕಿಸಬಹುದು ಎಂದು ಶ್ರೀ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮಿಗಳವರು ತಿಳಿಸಿದ್ದಾರೆ.

– ಹೆಚ್ ಎಸ್ ದ್ಯಾಮೇಶ್

